**ಎಮ್.ವಿ.ಸಿ. ನಂಃ204/2024**
**ಪಿ .ಡಬ್ಲ್ಯೂಃ1,**

**ದಿನಾಂಕ : 21-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ಎ.ಎಮ್. ವಾಯ. ಎದುರುದಾರ ಪರ ವಕೀಲರಿಂದ :**

ನಾನು 12ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತಿರುತ್ತೇನೆ. ಕನ್ನಡ ಓದಲು, ಬರೆಯಲು ಬರುತ್ತದೆ. ಇಂಗ್ಲೀಷ ನಿಖರವಾಗಿ ಬರುವುದಿಲ್ಲ. ಪ್ರವೀಣ ನನ್ನ ಗೆಳೆಯ. ಪ್ರವೀಣಗೆ ಗುಟಕಾ ಮತ್ತು ಅಡಕಿ ಚೀಟ ತಿನ್ನುವ ಅಭ್ಯಾಸ ಇಲ್ಲಾ. ನಾನು ಪೆಟ್ರೋಲ ಪಂಪದಲ್ಲಿ ಕೆಲಸ ಮಾಡುತ್ತೇನೆ ಎಂದು ಯಾವುದೇ ಪ್ರಮಾಣ ಪತ್ರ ಸಲ್ಲಿಸಿಲ್ಲಾ. ನಾನು ಪರಿಹಾರ ಕೇಳಿ ಸಲ್ಲಿಸಿದ ಅರ್ಜಿ ಓದಿ ತಿಳಿದುಕೊಂಡು ಸಲ್ಲಿಸಿದ್ದೇನೆ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರ ಓದಿ ತಿಳಿದುಕೊಂಡು ಸಲ್ಲಿಸಿದ್ದೇನೆ. ನನಗೆ ತಿಂಗಳಿಗೆ ರೂ. 18,000/- ಸಂಬಳ ಅದು ನಗದು ರೂಪದಲ್ಲಿ ಕೊಡುತ್ತಿದ್ದರು. ನಾನು ತಿಂಗಳಿಗೆ ರೂ.18,000/- ಸಂಬಳ ಇತ್ತು ಎಂದು ಯಾವುದೇ ದಾಖಲೆ ಸಲ್ಲಿಸಿಲ್ಲಾ. ನನಗೆ ತಿಂಗಳಿಗೆ ರೂ.18,000/- ಸಂಬಳ ಇತ್ತು ಮತ್ತು ನಾನು ಜ್ಯೋತಿ ಪೆಟ್ರೋಲಿಯಂ ಕೆಲಸ ಮಾಡುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತವು ಪ್ರವೀಣ ಇವರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರವೀಣಗೆ ಬೈಕ ಚಲಾಯಿಸಲು ಯಾವುದೇ ಚಾಲನಾ ಪತ್ರ ಇರಲಿಲ್ಲಾ ಮತ್ತು ಬೈಕಗೆ ಯಾವುದೇ ವಿಮೆ ಇರಲಿಲ್ಲಾ ಎಂದರೆ ಸರಿಯಲ್ಲ. ವೈದ್ಯರು ನನಗೆ ಆರಾಮವಾಗಿ ಕೆಲಸ ಮಾಡಬಹುದು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲಾ ಎಂದರೆ ಸರಿಯಲ್ಲ . ಪ್ರವೀಣ ಇತರು ಅಜಾರೂಕತೆಯಿಂದ ಬೈಕ ಚಲಾಯಿಸಿದ ಕಾರಣ

**ಎಮ್.ವಿ.ಸಿ. ನಂಃ204/2024**
**ಪಿ .ಡಬ್ಲ್ಯೂಃ1,**

ನಾವೇ ವಾಹನದಿಂದ ಮೇಲಿಂದ ಬಿದ್ದು, ಗಾಯ ಪಡಿಸಿಕೊಂಡಿದ್ದು, ನಾವು ಪರಿಹಾರ ಪಡೆಯುವ ದುರದ್ದೇಶದಿಂಧ ಎ.ಪಿ.-02-ಟಿ.ಎಚ್. 1685 ಲಾರಿ ಮೇಲೆ ಸುಳ್ಳು ದೂರು ಸಲ್ಲಿಸಿ, ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**